# ಶ್ರೀರಾಜರಾಜೇಶ್ವರೀ ಅಷ್ಟಕಮ್ – ೩



**ಅಂಬಾ ಶಾಶ್ವತ ಆಗಮಾದಿವಿನುತಾ ಆರ್ಯಾ ಮಹಾದೇವತಾ
ಯಾ ಬ್ರಹ್ಮಾದಿ ಪಿಪೀಲಿಕಾಂತಜನನೀ ಯಾ ವೈ ಜಗನ್ಮೋಹಿನೀ ।
ಯಾ ಪಂಚಪ್ರಣವಾದಿರೇಫಜನನೀ ಯಾ ಚಿತ್ಕಲಾಮಾಲಿನೀ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೭ ॥**

ಅಮ್ಮಾ, ಶಾಶ್ವತವಾದ ವೇದಾದಿಗಳಿಂದ ಸ್ತುತಿಸಲ್ಪಡುವ ಆರ್ಯೆ ನೀನು, ಮಹಾದೇವತೆ ನೀನು. ಬ್ರಹ್ಮನಿಂದ ಆರಂಭಿಸಿ ಸಣ್ಣ ಇರುವೆಯ ತನಕ ಎಲ್ಲರಿಗೂ ತಾಯಿ ನೀನು. ಇಡೀ ಜಗತ್ತನ್ನೇ ತನ್ನ ಮಾಯೆಯಿಂದ ಮೋಹಕ್ಕೆ ಒಳಗಾಗಿಸಿದವಳು ನೀನು. ಐದು ಪ್ರಣವಗಳಿಗೂ ಮಹಾತ್ಮರ ಸ್ವಭಾವಕ್ಕೂ ಮೂಲ ಕಾರಣಳಾದವಳು ನೀನು. ಚಿತ್ ಮತ್ತು ಕಲೆಯನ್ನು ಮಾಲೆಯನ್ನಾಗಿ ಧರಿಸಿರುವ ಜ್ಞಾನಸ್ವರೂಪಿಣಿ ಪರದೇವತೆ, ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿರುವೆ.

**ಅಂಬಾಪಾಲಿತಭಕ್ತರಾಜಿವಿನುತಂ ಅಂಬಾಷ್ಟಕಂ ಯಃ ಪಠೇತ್
ಅಂಬಾಲೋಕಕಟಾಕ್ಷವೀಕ್ಷಲಲಿತಂ ಚೈಶ್ವರ್ಯಮವ್ಯಾಹತಮ್ ।
ಅಂಬಾ ಪಾವನ ಮಂತ್ರರಾಜಪಠನಾದಂತೇ ಚ ಮೋಕ್ಷಪ್ರದಾ
ಚಿದ್ರೂಪೀ ಪರದೇವತಾ ಭಗವತೀ ಶ್ರೀರಾಜರಾಜೇಶ್ವರೀ ॥ ೮ ॥**

ಜಗನ್ಮಾತೆಯಿಂದ ಪಾಲಿತರಾದ ಭಕ್ತಸಮೂಹವು ಸ್ತೋತ್ರ ಮಾಡಿದ ಈ ಅಂಬಾಷ್ಟಕವನ್ನು ಯಾರು ಪಠಿಸುವರೋ ಅವರು ಅಂಬೆಯ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ನಿರಂತರ ಐಶ್ವರ್ಯವನ್ನೂ ಕೊನೆಯಲ್ಲಿ ಜಗನ್ಮಾತೆಯ ಲೋಕವನ್ನೂ ಮೋಕ್ಷವನ್ನೂ ಹೊಂದುವರು. ಅಂತಹ ಜ್ಞಾನರೂಪಿಣಿ, ಪರದೇವತೆ, ಮಾತೃಸ್ವರೂಪಿಣಿಯಾದ ಭಗವತಿ, ನೀನೇ ಶ್ರೀ ರಾಜರಾಜೇಶ್ವರಿಯಾಗಿರುವೆ.

## ಸೂಕ್ತಿಪ್ರಭ



**ಒಂ**ದು ಚಿಕ್ಕ ಇರುವೆ ತನ್ನ ಜೀವನಕ್ಕಾಗಿ ಒಂದು ಧಾನ್ಯವನ್ನು ಹೊತ್ತೊಯ್ಯುತ್ತಿದ್ದರೆ, ಅದಕ್ಕೆ ನೀನು ಉಪದ್ರವ ಕೊಡಬೇಡ. ಕಾರಣ, ಅದಕ್ಕೂ ಒಂದು ಜೀವನವಿದೆ. ಜೀವನವೆಂಬುದು ನಿಜಕ್ಕೂ ಮಧುರವಾದುದು. — ಝುರತುಷ್ಟ



**ದೃ**ಶ್ಯವಾದುದನ್ನು ಅದೃಶ್ಯವಾದುದನ್ನಾಗಿ ಪರಿವರ್ತಿಸಿ, ಪ್ರತಿಯೊಂದನ್ನೂ ಬ್ರಹ್ಮವೆಂದೇ ಕಂಡುಕೊಳ್ಳಬೇಕು. ಹೀಗೆ ಬುದ್ಧಿಶಾಲಿಯಾದವನು ಶುದ್ಧಚೈತನ್ಯದ ಸಾರದಿಂದ ತನ್ನ ಮನಸ್ಸನ್ನು ತುಂಬಿಕೊಂಡು ಅನಂತ ಆನಂದದಲ್ಲಿ ನೆಲೆಸಬೇಕು. — ಶ್ರೀ ಶಂಕರ

**ಸೇ**ವೆ ಮಾಡುವವನು ಮುಕ್ತಿಯ ಮಾರ್ಗವನ್ನು ಕಂಡುಕೊಂಡಿರುತ್ತಾನೆ. ಅವನು ಗಿಡವೊಂದನ್ನು ನೆಟ್ಟು, ಕೆಲವು ವರ್ಷಗಳಾದ ಮೇಲೆ ನೆರಳು, ಹೂ, ಹಣ್ಣುಗಳನ್ನು ಪಡೆಯುವ



ವ್ಯಕ್ತಿಯಂತೆ. ಸೇವಾಕಾರ್ಯದ ಫಲ ಇದೇ ರೀತಿ. ಸಹಾಯದ ಅಗತ್ಯವಿದ್ದವರಿಗೆ ಸಹಾಯ ಮಾಡುವವನ ಆನಂದ ಇದೇ ರೀತಿ. — ಭಗವಾನ್ ಬುದ್ಧ



**ರೊ**ಟ್ಟಿ ಕೇಳಿದ ಮಗನಿಗೆ ನಿಮ್ಮಲ್ಲಿ ಯಾವ ತಂದೆ ಕಲ್ಲನ್ನು ಕೊಡುತ್ತಾನೆ? ಮೀನು ಕೇಳಿದವನಿಗೆ ಯಾರು ಹಾವು ಕೊಡುತ್ತಾನೆ? ನಿಮ್ಮಂತಹ ಕೆಟ್ಟವರಿಗೇ ನಿಮ್ಮ ಮಕ್ಕಳಿಗೆ ಒಳ್ಳೆಯದನ್ನೇ ಕೊಡಬೇಕೆಂದು ಗೊತ್ತಿರುವಾಗ, ದೇವಲೋಕದ ನಿಮ್ಮ ತಂದೆ ತನ್ನನ್ನು ಕೇಳಿದವರಿಗೆ ಇನ್ನೆಷ್ಟು ಒಳ್ಳೆಯದನ್ನು ಕೊಡದಿರುವುದಿಲ್ಲ? — ಏಸುಕ್ರಿಸ್ತ



**ಆ**ವಶ್ಯಕತೆ ಬಿದ್ದರೆ, ಸಾರ್ವತ್ರಿಕ ಭಾವದ ರಕ್ಷಣಾರ್ಥವಾಗಿ ಸಮಸ್ತವನ್ನೂ ತ್ಯಾಗ ಮಾಡಬೇಕು. — ಸ್ವಾಮಿ ವಿವೇಕಾನಂದ